# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 715 (808)
2. ಸದಸ್ಯರ ಹೆಸರು : ಶ್ರೀ ಸಿ.ಟಿ. ರವಿ (ವಿಧಾನ ಸಭಾ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 10.03.2026
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪ್ರಸ್ತುತ ಎಷ್ಟು ಕಿರು ವಿಮಾನ ನಿಲ್ದಾಣಗಳಿವೆ; ಈ ಪೈಕಿ ಎಷ್ಟು ಕಿರು ವಿಮಾನ ನಿಲ್ದಾಣಗಳೂ ಕಾರ್ಯಾಚರಿಸುತ್ತಿವೆ; (ವಿವರ ನೀಡುವುದು); | ಪ್ರಸ್ತುತ ರಾಜ್ಯದಲ್ಲಿ ಯಾವುದೇ ಕಿರು ವಿಮಾನ ನಿಲ್ದಾಣ (ಏರ್‌ಸ್ಟ್ರಿಪ್)ಗಳು ಇರುವುದಿಲ್ಲ. |
| (ಆ) | ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಕಿರು ವಿಮಾನ ನಿಲ್ದಾಣಗಳ ಅವಶ್ಯಕತೆ ಇದೆ; ಈ ಕುರಿತು ಸರ್ಕಾರ ಮಾಹಿತಿ ಸಂಗ್ರಹಿಸಿದೆಯೇ; (ವಿವರ ನೀಡುವುದು); | ರಾಜ್ಯದ ಚಿಕ್ಕಮಗಳೂರು, ಕೊಡಗು ಹಾಗೂ ದಕ್ಷಿಣ ಕನ್ನಡ (ಧರ್ಮಸ್ಥಳ) ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಮತ್ತು ಕೈಗಾರಿಕಾ ಕ್ಷೇತ್ರಗಳನ್ನು ಉತ್ತೇಜಿಸುವುದರ ಜೊತೆಗೆ ವಿಪತ್ತು ನಿರ್ವಹಣೆಯ ಸಂದರ್ಭಗಳಲ್ಲಿ ರಕ್ಷಣಾ ಕಾರ್ಯಾಚರಣೆಗಳಿಗೆ ಸಹಾಯವಾಗುವ ಉದ್ದೇಶದಿಂದ ಕಿರು ವಿಮಾನ ನಿಲ್ದಾಣ (ಏರ್‌ಸ್ಟ್ರಿಪ್)ಗಳನ್ನು ಅಭಿವೃದ್ಧಿಪಡಿಸುವುದು ಅಗತ್ಯವಾಗಿದೆ. |
| (ಇ) | ಕಳೆದ 3 ವರ್ಷಗಳಿಂದ ಎಷ್ಟು ಕಿರು ವಿಮಾನ ನಿಲ್ದಾಣಗಳ ಸ್ಥಾಪನೆಗೆ ಮಂಜೂರಾತಿ ನೀಡಿದೆ; ಈ ವಿಮಾನ ನಿಲ್ದಾಣಗಳಿಗೆ ಅಗತ್ಯ ಭೂಮಿ ಹಸ್ತಾಂತರ ಆಗಿದೆಯೇ? (ವಿವರ ನೀಡುವುದು) | ರಾಜ್ಯದಲ್ಲಿನ ಚಿಕ್ಕಮಗಳೂರು, ಕೊಡುಗು, ಹಾಗೂ ಧರ್ಮಸ್ಥಳದಲ್ಲಿ ಕಿರು ವಿಮಾನ ನಿಲ್ದಾಣ (ಏರ್‌ಸ್ಟ್ರಿಪ್) ಅಭಿವೃದ್ಧಿಪಡಿಸಲು ದಿನಾಂಕ: 07.07.2023 ರಂದು 2023-24ನೇ ಸಾಲಿನ ಆಯವ್ಯಯದಲ್ಲಿನ ಕ್ರಮ ಸಂಖ್ಯೆ: 244 ರಲ್ಲಿ ಘೋಷಣೆಯಾಗಿರುತ್ತದೆ.<br><br>ಚಿಕ್ಕಮಗಳೂರು ಏರ್ ಸ್ಟ್ರಿಪ್ ಗಾಗಿ 137-23 ಎಕರೆ / ಗುಂಟೆ ಜಮೀನುಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ 122-22 ಎಕರೆ / ಗುಂಟೆ ಸರ್ಕಾರಿ ಜಮೀನುಗಳಾಗಿದ್ದು, 17-01 ಎಕರೆ / ಗುಂಟೆ ಖಾಸಗಿ ಜಮೀನುಗಳಾಗಿರುತ್ತದೆ. 17-01 ಎಕರೆ / ಗುಂಟೆ ಖಾಸಗಿ ಜಮೀನುಗಳನ್ನು ರೂ.17.06 ಕೋಟಿ ವೆಚ್ಚದಲ್ಲಿ ಭೂಸ್ವಾಧೀನ ಪಡಿಸಲು ಆದೇಶವಾಗಿರುತ್ತದೆ. ಅದರಂತೆ, ಜಿಲ್ಲಾಡಳಿತವು 16-38 ಎಕರೆ / ಗುಂಟೆ ಜಮೀನುಗಳಿಗೆ ಪ್ರಾಥಮಿಕ ಅಧಿಸೂಚನೆಯನ್ನು ದಿನಾಂಕ: 05.12.2025ರಂದು ಹೊರಡಿಸಿರುತ್ತದೆ. ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ JMC ಕಾರ್ಯವು ಪ್ರಗತಿಯಲ್ಲಿ ಇರುತ್ತದೆ.<br><br>ಕೊಡಗು ಮತ್ತು ಧರ್ಮಸ್ಥಳಗಳಲ್ಲಿ ಏರ್‌ಸ್ಟ್ರಿಪ್ ಗಾಗಿ ಅವಶ್ಯವಿರುವ 140 ಎಕರೆ ಜಮೀನುಗಳನ್ನು ಗುರುತಿಸುವಂತೆ ಜಿಲ್ಲಾಧಿಕಾರಿಗಳು, ಕೊಡಗು ಮತ್ತು ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಇವರುಗಳನ್ನು ಕೋರಲಾಗಿದೆ. |

**ಸಂಖ್ಯೆ: ಮೂಅಇ 49 ರಾಅವಿ 2026**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು